# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರಿಗೆ ನಾಗಪುರದ ಮೀನುಗಾರಿಕೆ ಹಾಗೂ ಪಶು ವಿಜ್ಞಾನ ವಿಶ್ವವಿದ್ಯಾಲಯವು 'ಡಾಕ್ಟರ್ ಆಫ್ ಸೈನ್ಸ್' ಗೌರವ ಪದವಿಯನ್ನು ನೀಡಿ ಗೌರವಿಸಿದೆ.

ಸಂಪುಟ : 38 ಸಂಚಿಕೆ : 16 ಹೇವಿಳಂಬಿ–ಚೈತ್ರ ಕಲಿಯುಗಾಬ್ದ 5118 1–4–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ನವಭಾರತದ ರಾಜಕೀಯಕ್ಕೆ ಮುನ್ನುಡಿ ಬರೆದಿದೆ ಪಂಚರಾಜ್ಯ ಚುನಾವಣೆ

ಕೇವಲ ಹೊಸ ಸರ್ಕಾರಗಳನ್ನು ಆರಿಸುವುದಷ್ಟೇ ಚುನಾವಣೆಗಳ ಕೆಲಸವಲ್ಲ. ರಾಜಕೀಯ ಪಕ್ಷಗಳ ಬಲಾಬಲಗಳನ್ನು ಅಳೆಯುವುದರ ಜೊತೆಗೆ ಒಟ್ಟಾರೆಯಾಗಿ ಸಮಾಜದ ಮನಸ್ಥಿತಿ (ಪಬ್ಲಿಕ್ ಮೂಡ್), ಅಪೇಕ್ಷೆ ಮತ್ತು ಆದ್ಯತೆಗಳು ಯಾವ ದಿಸೆಯಲ್ಲಿವೆ ಎಂದು ತಿಳಿಯಲೂ ಚುನಾವಣಾ ಫಲಿತಾಂಶಗಳು ಮಾನದಂಡವಾಗುತ್ತವೆ. ಇತ್ತೀಚೆಗೆ ನಡೆದ ಐದು ರಾಜ್ಯಗಳ ಚುನಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ವಿಷಯ ಸ್ಪಷ್ಟವಾಗುತ್ತದೆ. ಅದರಲ್ಲೂ ವಿಶೇಷವಾಗಿ ಜನಸಂಖ್ಯಾ ದೃಷ್ಟಿಯಿಂದ ದೇಶದ ಅತಿದೊಡ್ಡ ರಾಜ್ಯವಾದ ಉತ್ತರ ಪ್ರದೇಶ ರಾಜ್ಯದ ಫಲಿತಾಂಶ ಮತದಾರರನ್ನು ಸಮೀಪಿಸುವಲ್ಲಿ ರಾಜಕೀಯ ಪಕ್ಷಗಳ ಧೋರಣೆ ಮತ್ತು ವಿಶ್ಲೇಷಣೆಯ ವಿಧಾನವನ್ನೇ ಬದಲಾಯಿಸಿದೆ ಎಂದರೆ ಅತಿಶಯವಲ್ಲ.



ರಾಜ್ಯವಾರು ಚುನಾವಣಾ ಫಲಿತಾಂಶವನ್ನು ಗಮನಿಸಿದರೆ ಒಂದು ರೀತಿಯ ಸಾಮಾನ್ಯ ನಮೂನೆ ಕಂಡುಬರುತ್ತದೆ.

ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಪಂಜಾಬ್‌ನಲ್ಲಿ ಆಯ್ಕೆಯಾದ ಪಕ್ಷಗಳು ಆಯಾ ರಾಜ್ಯಗಳಲ್ಲಿ 3/4 ಕ್ಕಿಂತಲೂ ಹೆಚ್ಚು ಕ್ಷೇತ್ರಗಳಲ್ಲಿ ಗೆದ್ದು ರಾಜ್ಯವ್ಯಾಪಿ ಬೆಂಬಲ ಪಡೆದದ್ದು ಕಂಡುಬರುತ್ತದೆ. (ಉ.ಪ್ರ. : ಬಿಜೆಪಿ+ 324/403, ಉತ್ತರಾಖಂಡ: ಬಿಜೆಪಿ 57/70, ಪಂಜಾಬ್ : ಕಾಂಗ್ರೆಸ್ 77/117).

ಪರ್ವತರಾಜ್ಯ ಉತ್ತರಾಖಂಡದ ಫಲಿತಾಂಶ ಅಸ್ಥಿತ ಸರ್ಕಾರ ಮತ್ತು ಕಾಂಗ್ರೆಸ್ ದುರಾಡಳಿತದ ವಿರುದ್ಧ ಮತದಾರ ನೀಡಿದ ತೀರ್ಪು ಎಂದೇ ಹೇಳಲಾಗುತ್ತದೆ. ಪಂಜಾಬ್‌ನಲ್ಲಿ ನಿರೀಕ್ಷಿತ ಫಲಿತಾಂಶ ವ್ಯಕ್ತವಾಗಿದ್ದು ಅಧಿಕಾರದಲ್ಲಿರುವ ಪಕ್ಷದ ವಿರುದ್ಧ ನೀಡಿದ ಫಲಿತಾಂಶವಾಗಿದೆ. ಜೊತೆಗೆ ಅಕಾಲಿದಳದ ವಂಶವಾದ, ರಾಜ್ಯವನ್ನು ಕ್ಯಾನ್ಸರಿನಂತೆ ಕಾಡುತ್ತಿರುವ ಡ್ರಗ್ ಮಾಫಿಯಾ ವಿರುದ್ಧ ನೀಡಿದ ಮತವಾಗಿದೆ. ಪಂಜಾಬ್ ಗೆಲುವನ್ನು ಕಾಂಗ್ರೆಸ್ ಪಕ್ಷದ ಗೆಲುವು ಅನ್ನುವುದಕ್ಕಿಂತ ಕ್ಯಾ. ಅಮರಿಂದರ್ ಸಿಂಗ್ ಗೆಲುವು ಎನ್ನುವುದು ಹೆಚ್ಚು ಸೂಕ್ತ. ಅಕಾಲಿ ದಳದಿಂದಲೇ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದ ರಾಜವಂಶಸ್ಥ ಅಮರಿಂದರ್ ಸಿಂಗ್ ಭ್ರಷ್ಟಾಚಾರದ ಕಳಂಕ ಇಲ್ಲದ ವ್ಯಕ್ತಿ ಎನ್ನುವ ಇಮೇಜ್ ಹೊಂದಿದ್ದಾರೆ.

ಕರಾವಳಿಯ ಪುಟ್ಟ ರಾಜ್ಯ ಗೋವಾದಲ್ಲಿ ಮುಖ್ಯಮಂತ್ರಿ ಪರ್ಸೇಕರ್ ಸೇರಿದಂತೆ ಬಿಜೆಪಿ ಸರ್ಕಾರದ 8 ರಲ್ಲಿ 6 ಮಂತ್ರಿಗಳು ಚುನಾವಣೆಯಲ್ಲಿ ಸೋತಿದ್ದಾರೆ. ಯಾವುದೇ ಪಕ್ಷಕ್ಕೆ ಬಹುಮತ ನೀಡದ ಫಲಿತಾಂಶ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳಿಗೆ ಹೆಚ್ಚಿನ ಸ್ಥಾನಗಳನ್ನು ನೀಡಿದೆ. ಜೊತೆಗೆ ಶೇಕಡಾವಾರು ಮತಗಳಿಕೆಯಲ್ಲಿ ಪ್ರಥಮ ಸ್ಥಾನದಲ್ಲಿರುವ ಬಿಜೆಪಿ ಜನಪ್ರಿಯ ಪಕ್ಷವಾಗಿ ಹೊರಹೊಮ್ಮಿದೆ.

ಇನ್ನೊಂದು ಪ್ರಮುಖ ಅಂಶವೆಂದರೆ ಪಂಜಾಬಿನಲ್ಲಿ ಸರ್ಕಾರ ಸ್ಥಾಪಿಸುವ ಕನಸು ಕಾಣುತ್ತಿದ್ದ ಆಮ್ ಆದ್ಮೀ ಪಕ್ಷ ಗೆದ್ದ ಅಭ್ಯರ್ಥಿಗಳ ಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿದ್ದರೂ ಶೇಕಡಾವಾರು ಮತಗಳಿಕೆಯಲ್ಲಿ ದೂರದ 3ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಇನ್ನು ಗೋವಾ ರಾಜ್ಯದಲ್ಲಿ ಒಂದೂ ಅಭ್ಯರ್ಥಿಯನ್ನು ಗೆಲ್ಲಲಾಗದೇ ಅತೀ ಕಡಿಮೆ ಮತಗಳನ್ನು ಆಪ್ ಪಡೆದಿದೆ. ಇದರೊಂದಿಗೆ ಅರಾಜಕ ರಾಜಕಾರಣವನ್ನು ಈ ದೇಶದ ಮತದಾರ ಸಹಿಸುವುದಿಲ್ಲ ಎನ್ನುವುದು ಸ್ಪಷ್ಟವಾಗಿದೆ.

ಮಣಿಪುರ ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್‌ನ್ನು ತಿರಸ್ಕರಿಸಿದ್ದು, ಶೇಕಡಾವಾರು ಮತಗಳಿಕೆಯಲ್ಲಿ ಎರಡನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. (ಬಿಜೆಪಿ : 34.2%, ಕಾಂಗ್ರೆಸ್ 31.2%). ಒಟ್ಟು 70 ರಲ್ಲಿ 21 ಸ್ಥಾನಗಳಲ್ಲಿ ಗೆದ್ದಿರುವ ಬಿಜೆಪಿ ಮೊದಲ ಬಾರಿಗೆ ನಾರ್ಥ್ ಈಸ್ಟರ್ನ್ ಡೆಮೊಕ್ರಾಟಿಕ್ ಅಲಯನ್ಸ್ (NEDA) ಮಿತ್ರಪಕ್ಷಗಳೊಂದಿಗೆ ಮಣಿಪುರದಲ್ಲಿ ಸರ್ಕಾರ ಸ್ಥಾಪಿಸಿದೆ. ಇದರೊಂದಿಗೆ ಮೇಘಾಲಯ, ಮಿಜೋರಾಂ ಮತ್ತು ತ್ರಿಪುರವನ್ನು ಹೊರತುಪಡಿಸಿ ಉಳಿದ ಕಡೆ ಬಿಜೆಪಿ ಆಡಳಿತ ಸ್ಥಾಪನೆಯಾಗಿದ್ದು ದಶಕಗಳಿಂದ ನಿರ್ಲಕ್ಷ್ಯಕ್ಕೊಳಗಾಗಿರುವ ಸಪ್ತ ಸೋದರಿಯರ ನಾಡು ಎಂದೂ ಕರೆಯಲ್ಪಡುವ ಈಶಾನ್ಯ ಭಾರತ ಪ್ರದೇಶದಲ್ಲಿ ಅಭಿವೃದ್ಧಿಯ ಆಶಾಭಾವನೆ ಜೀವ ತಳೆದಿದೆ.

ಜನಬಾಹುಳ್ಯದಿಂದ ದೇಶದ ಅತಿದೊಡ್ಡ ರಾಜ್ಯವಾದ ಉತ್ತರಪ್ರದೇಶ ರಾಷ್ಟ್ರರಾಜಕೀಯದಲ್ಲಿ ಪ್ರಮುಖ ಸ್ಥಾನದಲ್ಲಿದೆ. ದೆಹಲಿಯ ಅಧಿಕಾರದ ಗದ್ದುಗೆಯ ಮಾರ್ಗ ಉತ್ತರ ಪ್ರದೇಶದ ಮೂಲಕವೇ ಹಾದುಹೋಗುವುದು ಎನ್ನುವುದು ರಾಜಕೀಯ ಪಡಸಾಲೆಯಲ್ಲಿ ಇಂದಿಗೂ ಚಾಲ್ತಿಯಲ್ಲಿರುವ ಮಾತು. ಕಾರಣ ರಾಷ್ಟ್ರ ರಾಜಕಾರಣದಲ್ಲಿ ಸ್ಥಿತ್ಯಂತರಗಳನ್ನೇ ಸೃಷ್ಟಿಸಬಲ್ಲ ವಿಷಯಗಳಾದ ವಿಸ್ತೃತ ಮತ್ತು ಫಲವತ್ತಾದ ಗಂಗಾ ನದಿಮುಖಜ ಭೂಮಿಯಲ್ಲಿನ ಕೃಷಿಕರ ಕೋಟಲೆಗಳಿಂದ ಮೊದಲ್ಗೊಂಡು ನೆರೆಯ ಪಾಕಿಸ್ತಾನ, ನೇಪಾಳಗಳೊಡನೆ ಭಾರತದ ಸಂಬಂಧ, ಗೋಮಾಂಸ ವ್ಯಾಪಾರದ ಸಾವಿರಾರು ಕೋಟಿ ವ್ಯವಹಾರ, ಹಿಂದೂಗಳ ಶ್ರದ್ಧಾಕೇಂದ್ರ ಶ್ರೀರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ಭವ್ಯಮಂದಿರದ ನಿರ್ಮಾಣ, ಅಧಿಕಾರಾರೂಢ ಎಸ್ಪಿಯ ಕೊನೆಗಾಣದ ಪರಿವಾರವಾದ ಮತ್ತು ಬಿಎಸ್ಪಿಯ ಜಾತಿ ರಾಜಕಾರಣ, ಹದಗೆಟ್ಟಿದ್ದ ರಾಜ್ಯದ ಕಾನೂನು ಸುವ್ಯವಸ್ಥೆ, ಮುಗಿಲುಮುಟ್ಟಿದ್ದ ಮುಸ್ಲಿಂ ಓಲೈಕೆ – ಹೀಗೆ ಹತ್ತು ಹಲವಾರು ವಿಷಯಗಳನ್ನು ತನ್ನ ಒಡಲಿನಲ್ಲಿಟ್ಟುಕೊಂಡು ಚುನಾವಣೆಗೆ ತಯಾರಾಗಿದ್ದ ರಾಜ್ಯವದು. ಈ ಪ್ರಮುಖ ರಾಜ್ಯದಲ್ಲಿ ಗೆಲುವು ಸಾಧಿಸಲು ರಾಜಕೀಯ ಪಕ್ಷಗಳು ಶತಾಯಗತಾಯ ಎಲ್ಲ ತರಹದ ತಂತ್ರಗಳನ್ನೂ ನಡೆಸಿದವು.

ಆದರೆ ಚುನಾವಣೆಯ ಫಲಿತಾಂಶವನ್ನು ವಿಶ್ಲೇಷಿಸಿದರೆ ಒಂದಿಷ್ಟು ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ರಾಜ್ಯದ ಮತದಾರನ ಒಲವು ಜಾತಿಮತಗಳ ವಿಭಜನೆ ಅಥವಾ ಪೊಳ್ಳು ಆಶ್ವಾಸನೆಗಿಂತ ಇದುವರೆಗೆ ಕೇಂದ್ರ ಸರ್ಕಾರದ ಜನಪರ ಆಡಳಿತದಿಂದ ಆಗುತ್ತಿರುವ ಪರಿವರ್ತನೆ, ಓರ್ವ ಸಮರ್ಥ ನಾಯಕನಾಗಿ ಹೊರಹೊಮ್ಮಿರುವ ಪ್ರಧಾನಿ ಮೋದಿಯವರ ವ್ಯಕ್ತಿತ್ವ, ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಪ್ರಗತಶೀಲ ಸ್ಥಿರ ಸರ್ಕಾರವನ್ನು

*(2ನೇ ಪುಟಕ್ಕೆ...)*

**2011ರ ಜನಗಣತಿಯ ಪ್ರಕಾರ ಉತ್ತರ ಪ್ರದೇಶದ ಜನಸಂಖ್ಯೆಯಲ್ಲಿ 19.3% ಮುಸ್ಲಿಮರಿದ್ದಾರೆ. ಸಾಮಾನ್ಯವಾಗಿ ಇದುವರೆಗಿನ ಚುನಾವಣೆಗಳ ಮತದಾನ ಮಾದರಿಗಳನ್ನು ಅವಲೋಕಿಸಿದರೆ ಮುಸಲ್ಮಾನ ಸಮುದಾಯ ಕಾಂಗ್ರೆಸ್, ಸಮಾಜವಾದಿ ಪಕ್ಷ ಸೇರಿದಂತೆ ತಥಾಕಥಿತ ಸೆಕ್ಯುಲರ್ ಪಕ್ಷಗಳ ಮತಬ್ಯಾಂಕ್ ಆಗಿದೆ. ಮತ್ತು ಮುಸ್ಲಿಂ ಸಮಾಜ ಮುಲ್ಲಾ ಮೌಲ್ವಿಗಳ ಫತ್ವಾದ ಆದೇಶದಂತೆ ದೊಡ್ಡ ಪ್ರಮಾಣದಲ್ಲಿ ಒಂದು ಪಕ್ಷಕ್ಕೇ ಗುಂಪು ಗುಂಪಾಗಿ ಮತ ನೀಡಿದ್ದು ಕಂಡುಬರುತ್ತದೆ. ಹಾಗೆಯೇ ಉಳಿದ ಸಮುದಾಯಗಳಿಗೆ ಹೋಲಿಸಿದರೆ ಮುಸ್ಲಿಮರ ಮತದಾನದ ಪ್ರಮಾಣವೂ ಹೆಚ್ಚು. ಭಾರತೀಯ ಜನತಾ ಪಕ್ಷವನ್ನು ಹಿಂದುತ್ವವಾದಿ ಮುಸ್ಲಿಂ ವಿರೋಧಿ ಎಂದೇ ಪ್ರಚಾರ ಮಾಡಲಾಗುತ್ತದೆ. ಹೀಗಿರುವ ಹೊರತಾಗಿಯೂ ಈ ಬಾರಿಯ ಚುನಾವಣೆಯಲ್ಲಿ ಮುಸ್ಲಿಂ ಬಾಹುಳ್ಯದ ಮತ್ತು ಆ ಸಮುದಾಯವೇ ನಿರ್ಣಾಯಕವಾಗಿರುವ ಮುಝಫರ್‌ನಗರ, ಶಾಮ್ಲಿ, ಸಹರಾನ್‌ಪುರ, ಬರೇಲಿ, ಬಿಜ್‌ನ್ನೌರ್, ಮೀರತ್‌ನ ಸರ್ದಾನಾ, ಗೋರಖ್‌ಪುರದ ಖಲೀದಾಬಾದ್, ಮೊರಾದಾಬಾದ್ ಮೊದಲಾದ ಕ್ಷೇತ್ರಗಳಲ್ಲಿ ಬಿಜೆಪಿ ಜಯಭೇರಿ ಭಾರಿಸಿದೆ. ಇದನ್ನು ಅನೇಕ ರೀತಿಯಲ್ಲಿ ರೀತಿಯಲ್ಲಿ ಅರ್ಥೈಸಬಹುದು.**



**ಒಂದು ಇದುವರೆಗಿನ ನಡೆದುಬರುತ್ತಿರುವ ಮುಸ್ಲಿಂ ತುಷ್ಟೀಕರಣ ಮತ್ತು ಮತಬ್ಯಾಂಕ್ ವಿರುದ್ಧ ಧೃವೀಕರಣಗೊಂಡು ಬಿಜೆಪಿಯ ಪರವಾಗಿ ಮತ ಚಲಾವಣೆಯಾಗಿರಬಹುದು. ತಥಾಕಥಿತ ಸೆಕ್ಯುಲರ್ ಪಕ್ಷಗಳು ಇಂತಹ ಕ್ಷೇತ್ರಗಳಲ್ಲಿ ಮುಸಲ್ಮಾನ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಿದುದರ ಪರಿಣಾಮ ಮುಸ್ಲಿಂ ಮತವಿಭಜನೆ ಮತ್ತು ಹಿಂದೂ ಮತಗಳ ಏಕತ್ರೀಕರಣದಿಂದ ಬಿಜೆಪಿಗೆ ಲಾಭವಾಗಿರಬಹುದು. ಇವೆಲ್ಲವೂ ಅಲ್ಲದೇ ಅನೇಕ ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮುಸ್ಲಿಂ ಸಮುದಾಯದ ಮತದಾರರು, ಅದರಲ್ಲೂ ಮುಸ್ಲಿಂ ಮಹಿಳೆಯರು ಬಿಜೆಪಿಯನ್ನು ಬೆಂಬಲಿಸಿದ್ದು ಕಂಡುಬಂದಿದೆ. ಉದಾಹರಣೆಗೆ ಶೇ. 65ರಷ್ಟು ಮುಸಲ್ಮಾನ ಜನಸಂಖ್ಯೆಯುಳ್ಳ ಎಸ್‌ಪಿ/ಬಿಎಸ್‌ಪಿಗಳ ಭದ್ರಕೋಟೆಯಾದ ದೇವಬಂದ್ ಕ್ಷೇತ್ರದಲ್ಲಿ ಬಿಜೆಪಿಯ ಅಭ್ಯರ್ಥಿ 29 ಸಾವಿರಕ್ಕೂ ಹೆಚ್ಚು ಅಂತರದಿಂದ ಜಯಗಳಿಸಿದ್ದಾರೆ. ಬಿಜೆಪಿಯ ಅಭ್ಯರ್ಥಿ 1.02ಲಕ್ಷದಷ್ಟು ಮತಗಳಿಸಿದ್ದರೆ, ಸಮೀಪದ ಪ್ರತಿಸ್ಪರ್ಧಿಗಳಾದ ಎಸ್‌ಪಿ ಮತ್ತು ಬಿಎಸ್‌ಪಿ ಅಭ್ಯರ್ಥಿಗಳು ಗಳಿಸಿದ ಒಟ್ಟು ಮತ 1.28 ಲಕ್ಷದಷ್ಟು, ಉಳಿದ ಎಲ್ಲ ಅಭ್ಯರ್ಥಿಗಳು ಗಳಿಸಿದ ಒಟ್ಟು ಮತ ಸುಮಾರು 3 ಸಾವಿರ. ಮುಸ್ಲಿಂ ಮತದಾರರೂ ಬಿಜೆಪಿಯನ್ನು ಬೆಂಬಲಿಸದ ಹೊರತು ಈ ಕ್ಷೇತ್ರದಲ್ಲಿ ಗೆಲ್ಲುವುದು ಅಸಾಧ್ಯ. ಮುಸಲ್ಮಾನ ಸಮಾಜ ಜಾಗೃತಗೊಂಡಿದ್ದು ಮತೀಯ ಮತಬ್ಯಾಂಕ್ ರಾಜನೀತಿಗೆ ಬಲಿಯಾಗದೇ ಪ್ರಗತಿಯ ದಾರಿಯಲ್ಲಿ ನಡೆಯುವ ರಾಜಕೀಯವನ್ನು ಬೆಂಬಲಿಸುತ್ತಿರುವುದನ್ನು ಇದು ತೋರಿಸುತ್ತದೆ.**

*(1ನೇ ಪುಟದಿಂದ...)*

ಸ್ಥಾಪಿಸಬಲ್ಲ ಪಕ್ಷದ ಕಡೆಗಿದ್ದದ್ದು ಸ್ಪಷ್ಟವಾಗಿ ಕಾಣುತ್ತದೆ. ಉದಾಹರಣೆಗೆ ಸ್ವಾತಂತ್ರ್ಯದ 7ದಶಕಗಳ ನಂತರವೂ ರಾಜ್ಯದ 1529 ವಿದ್ಯುತ್ ಸಂಪರ್ಕರಹಿತ ಹಳ್ಳಿಗಳ ಪೈಕಿ 1464 ಹಳ್ಳಿಗಳಿಗೆ ಬೆಳಕುಕಾಣಿಸಿದ ಕೇಂದ್ರ ಸರ್ಕಾರದ ಕೆಲಸ ಇಂದು ಗುರುತಿಸಲ್ಪಡುತ್ತಿದೆ. ಉಜ್ವಲಾ ಯೋಜನೆಯ ಅನ್ವಯ ಬಡ ಮಧ್ಯಮ ವರ್ಗದ ಕುಟುಂಬಗಳೂ ಗ್ಯಾಸ್ ಸಂಪರ್ಕ ಪಡೆದು ಮಹಿಳೆಯರು ಒಲೆಯ ಹೊಗೆ ಸೇವನೆಯಿಂದ ಮುಕ್ತವಾದರು. ಇಂತಹ ಜನಪರ ಯೋಜನೆಗಳು ಸಾಮಾನ್ಯರಲ್ಲಿ ಜನಹಿತದ ಪಕ್ಷ ಯಾವುದು ಎಂದು ಚಿಂತಿಸುವಂತೆ ಮಾಡಿದವು. ನೋಟು ಅಮಾನ್ಯೀಕರಣ, ಸರ್ಜಿಕಲ್ ಸ್ಟ್ರೈಕ್ ಮೊದಲಾದ ದಿಟ್ಟ ನಡೆಗಳನ್ನು ತೆಗೆದುಕೊಂಡಿದ್ದು ಕೇಂದ್ರದ ಆಡಳಿತ ಪಕ್ಷ ಸಮರ್ಥ ಸರ್ಕಾರ ನೀಡಬಲ್ಲದು ಎಂದು ಮತದಾರರಲ್ಲಿ ವಿಶ್ವಾಸ ಮೂಡಿಸಿತ್ತು.

ಹಾಗೆಯೇ ಚುನಾವಣಾ ರಣತಂತ್ರ ರೂಪಿಸಿ ಅದನ್ನು ಕಾರ್ಯಗತಗೊಳಿಸಿ ಯಶಸ್ವಿಗೊಳಿಸುವಲ್ಲಿ ಬಿಜೆಪಿ ಪಕ್ಷಾಧ್ಯಕ್ಷ ಅಮಿತ್ ಶಾ ಮತ್ತು ಅವರ ತಂಡದ ಒಂದು ವರ್ಷಕ್ಕೂ ಹೆಚ್ಚು ಕಾಲ ನಡೆಸಿದ ಅವಿರತ ಕಾರ್ಯ ಶ್ಲಾಘನೀಯವಾಗಿದೆ. ಪ್ರಧಾನಿ ಮೋದಿಯವರೂ ಸೇರಿದಂತೆ ತಾರಾ ಪ್ರಚಾರಕ ರ್‍ಯಾಲಿಗಳಿಂದ ಹಿಡಿದು ಬೂತ್ ನಿರ್ವಹಣೆಯವರೆಗೆ ವ್ಯವಸ್ಥಿತ ಕಾರ್ಯತಂತ್ರದಿಂದ ಬಿಜೆಪಿ ಇಂತಹ ಬೃಹತ್ ಜನಾದೇಶ ಪಡೆಯಲು ಸಾಧ್ಯವಾಯಿತು. ಹಾಗೆಯೇ ಬಿಜೆಪಿ ಮತ್ತೊಮ್ಮೆ ಅಖಿಲ ಭಾರತೀಯ ರಾಜಕೀಯದಲ್ಲಿ ಪ್ರಬಲವಾಗಿ ಸ್ಥಾಪಿತವಾಯಿತು.

ಒಟ್ಟಾರೆಯಾಗಿ ಪಂಚರಾಜ್ಯಗಳ ಚುನಾವಣೆಯಿಂದ ಸಾಂಪ್ರದಾಯಿಕ, ಜಾತಿ ಮತ್ತು ಮತಬ್ಯಾಂಕ್ ಆಧಾರಿತ ರಾಜಕಾರಣದಿಂದ ಅಭಿವೃದ್ಧಿಶೀಲ ಹಾಗೂ ದೇಶಹಿತದ ಕಾರ್ಯಕ್ರಮಗಳನ್ನು ಮುಂದಿಡುವ ಪಕ್ಷಗಳನ್ನು ಬೆಂಬಲಿಸುವುದು ಸ್ಪಷ್ಟವಾಗಿದೆ. ಹಾಗೆಯೇ ದೇಶದ ಮತದಾರರೂ ಪ್ರಬುದ್ಧರಾಗುತ್ತಿದ್ದಾರೆ. •

ಸೆಲೆಬ್ರಿಟಿಗಳಲ್ಲ
ಸದ್ದಿಲ್ಲದ ಸಾಧಕರು

## ರೂಪಾದೇವಿ: ನೋವು ನುಂಗಿದ ಸಾಧಕಿ

**ಏಕಾಂಗಿಯಾಗಿ ಹೋರಾಟ ಮಾಡಿ, ಕಷ್ಟಕೋಟಲೆಗಳನ್ನು ಮೀರಿ, ಬಡತನವನ್ನು ಲೆಕ್ಕಿಸದೇ ಕಠಿಣ ಪರಿಶ್ರಮ ಮತ್ತು ಆತ್ಮವಿಶ್ವಾಸದಿಂದ ಅಂದುಕೊಂಡಿದ್ದನ್ನು ಸಾಧಿಸಿದ ಯಶಸ್ವಿ ಮಹಿಳೆಯ ಕಿರುಪರಿಚಯ.**




ಭಾರತದಲ್ಲಿ ಫುಟ್‌ಬಾಲ್ ಆಟ ಅಷ್ಟೊಂದು ಜನಪ್ರಿಯಗೊಂಡಿಲ್ಲ. ಆದರೂ ಫುಟ್‌ಬಾಲ್ ಅಭಿಮಾನಿಗಳ ಸಂಖ್ಯೆಗೇನೂ ಕಡಿಮೆ ಇಲ್ಲ! ಶಾಲಾ ದಿನಗಳಲ್ಲಿ ಫುಟ್‌ಬಾಲ್ ಆಡುತ್ತ ಬೆಳೆದು, ರಾಷ್ಟ್ರೀಯ ಮಹಿಳಾ ಫುಟ್‌ಬಾಲ್ ತಂಡವನ್ನು ಪ್ರತಿನಿಧಿಸಿ, ಇದೀಗ ಅಂತರರಾಷ್ಟ್ರೀಯ ಮಟ್ಟದ ಫುಟ್‌ಬಾಲ್ ಪಂದ್ಯಗಳಿಗೆ ರೆಫ್ರಿಯಾಗಿರುವ ಯುವ ಸಾಧಕಿ ರೂಪಾದೇವಿ ಅವರ ಸಾಧನೆ ಕಥೆ ಇದು. ಭಾರತದ ಮೊಟ್ಟಮೊದಲ ಅಂತರರಾಷ್ಟ್ರೀಯ ಮಹಿಳಾ ರೆಫ್ರಿ ಎಂಬ ಕೀರ್ತಿಗೂ ರೂಪಾದೇವಿ ಪಾತ್ರರಾಗಿದ್ದಾರೆ.

ರೂಪಾದೇವಿ ತಮಿಳುನಾಡಿನ ದಿಂಡಿಗಲ್ ಪಟ್ಟಣದವರು. ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿದ ರೂಪಾದೇವಿಗೆ ಚಿಕ್ಕ ವಯಸ್ಸಿನಿಂದಲೂ ಫುಟ್‌ಬಾಲ್ ಕ್ರೀಡೆ ಅಂದರೆ ಅತೀವ ಪ್ರೀತಿ. ಶಾಲಾ ಮತ್ತು ಕಾಲೇಜು ದಿನಗಳಲ್ಲಿ ವಿದ್ಯಾಭ್ಯಾಸಕ್ಕಿಂತಲೂ ಫುಟ್‌ಬಾಲ್ ಮೇಲೆ ಹೆಚ್ಚಿನ ಆಸಕ್ತಿ ತೋರುತ್ತಿದ್ದರು. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಮಹಿಳಾ ಫುಟ್‌ಬಾಲ್ ಟೂರ್ನಿಗಳಲ್ಲಿ ಅತ್ಯುತ್ತಮ ಪ್ರದರ್ಶನ ತೋರುವ ಮೂಲಕ ದೇಶದ ಗಮನ ಸೆಳೆದಿದ್ದರು. ಪದವಿ ಓದುವಾಗ ಶ್ರೀಲಂಕಾ ವಿರುದ್ಧದ ಪಂದ್ಯದಲ್ಲಿ ಭಾರತವನ್ನು ಪ್ರತಿನಿಧಿಸಿ 5 ಗೋಲ್‌ಗಳನ್ನು ಹೊಡೆದಿದ್ದರು. ಇದು ಅವರ ಮೊದಲ ಅಂತರರಾಷ್ಟ್ರೀಯ ಪಂದ್ಯವಾಗಿತ್ತು. ಫುಟ್‌ಬಾಲ್ ಕ್ರೀಡೆಯಲ್ಲಿ ಚಿಗುರುತ್ತಿರುವಾಗಲೇ ದುರಾದೃಷ್ಟವಶಾತ್ ರೂಪಾದೇವಿ, ಒಂದೇ ವರ್ಷದಲ್ಲಿ ತಂದೆತಾಯಿಯನ್ನು ಕಳೆದುಕೊಂಡರು. ಈ ಸಂದರ್ಭದಲ್ಲಿ ಅವರಿಗೆ ಆರ್ಥಿಕ ನೆರವು ಮತ್ತು ನೈತಿಕ ಸ್ಥೈರ್ಯ ತುಂಬಲು ಯಾರೂ ಮುಂದೆ ಬರಲಿಲ್ಲ. ಆದರೂ ಫುಟ್‌ಬಾಲ್ ಮೇಲಿನ ಪ್ರೀತಿ ಎಳ್ಳಷ್ಟೂ ಕಡಿಮೆಯಾಗಲಿಲ್ಲ.

ಆರ್ಥಿಕ ಮುಗ್ಗಟ್ಟು ಮತ್ತು ವೈಯಕ್ತಿಕ ಸಮಸ್ಯೆಗಳಿಂದ ಫುಟ್‌ಬಾಲ್ ಆಡಲು ಸಾಧ್ಯವಿಲ್ಲ ಎಂಬುದನ್ನು ಅರಿತ ಅವರು, ರಾಷ್ಟ್ರೀಯ ರೆಫ್ರಿ ಪರೀಕ್ಷೆಗೆ ಕುಳಿತರು. ಇದರಲ್ಲಿ ಉತ್ತೀರ್ಣರಾಗಿ ರಾಷ್ಟ್ರೀಯ ರೆಫ್ರಿಯಾಗಿ ಆಯ್ಕೆಯಾದರು. ನಂತರ ಅಂತರರಾಷ್ಟ್ರೀಯ ಮಟ್ಟದ ಫಿಫಾ ರೆಫ್ರಿ ಪರೀಕ್ಷೆ ತೆಗೆದುಕೊಂಡು ಯಶಸ್ವಿಯಾದರು. ಪರಿಶ್ರಮದ ಮೂಲಕ ಉನ್ನತ ಸ್ಥಾನಕ್ಕೆ ಬಂದ ರೂಪಾದೇವಿಯ ಸಾಧನೆ ಅನನ್ಯವಾದುದು. ಮುಂದಿನ ದಿನಗಳಲ್ಲಿ ಅವರಿಗೆ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯಗಳಿಗೆ ರೆಫ್ರಿಯಾಗುವ ಅವಕಾಶಗಳೂ ಬಂದಿವೆ.

## ಕನಸಿಗೊಂದು ಗುರಿಯ ಗರಿ



ಸರ್ಕಾರಿ ಕೆಲಸ ಅಂದರೆ ಯಾರಿಗೆ ತಾನೇ ಬೇಡ! ಈ ಕೆಲಸಕ್ಕಾಗಿ ನಾನಾ ಕಸರತ್ತುಗಳನ್ನು ಮಾಡುವುದುಂಟು! ಮೀಸಲಾತಿ ಹುಡುಕಾಟ ಸೇರಿದಂತೆ ಲಂಚ ಕೊಟ್ಟಾದರೂ ಸರಿ, ಸರ್ಕಾರಿ ಕೆಲಸ ಪಡೆಯಬೇಕು ಎಂಬ ಹಪಹಪಿತನ ನಮ್ಮ ಸಮಾಜದಲ್ಲಿ ಜೀವಂತವಾಗಿದೆ. ಆದರೆ ಇದೆಲ್ಲವನ್ನೂ ಮೀರಿ ಯುವತಿಯೊಬ್ಬರು ಮೀಸಲಾತಿಯನ್ನು ಧಿಕ್ಕರಿಸಿ ಅಸ್ಸಾಂ ಸರ್ಕಾರದ ಉನ್ನತ ಹುದ್ದೆ ತೊರೆದು ಸಾಮಾಜಿಕ ಸೇವೆಯಲ್ಲಿ ನಿರತರಾಗಿದ್ದಾರೆ.

ಅವರೇ 27ರ ಹರೆಯದ ಡಿಂಚಿಫಾ ಬೋರಾ. ಡಿಂಚಿಫಾ ಬೋರಾ ಅಸ್ಸಾಂ ರಾಜ್ಯದವರು. ಸಮೂಹ ಸಂವಹನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು 2ವರ್ಷ ಪತ್ರಕರ್ತೆಯಾಗಿಯೂ ಕೆಲಸ ಮಾಡಿದ್ದಾರೆ.

ಈ ಪತ್ರಿಕೋದ್ಯಮದಲ್ಲಿ ಸಾಧಿಸುವಂಥದ್ದಾದರೂ ಏನು? ಎಂಬ ಪ್ರಶ್ನೆಗಳನ್ನು ಹಾಕಿಕೊಂಡೇ ಆ ವೃತ್ತಿಯಿಂದ ಹೊರಬಂದರು. ಅಸ್ಸಾಂ ಲೋಕಸೇವಾ ಆಯೋಗ ನಡೆಸುವ ನಾಗರಿಕ ಸೇವಾ ಪರೀಕ್ಷೆಗೆ ಕುಳಿತರು. ಅರ್ಜಿ ತುಂಬುವಾಗ ಬೋರಾ ಮೀಸಲಾತಿ ಕಾಲಂ ಭರ್ತಿ ಮಾಡಲಿಲ್ಲ. ಅಂತಿಮವಾಗಿ ಬೋರಾ ಸಂದರ್ಶನಕ್ಕೆ ಆಯ್ಕೆಯಾದರು. 'ನಿಮಗೆ ಉತ್ತಮ ಅಂಕಗಳು ಬಂದಿವೆ, ಹಾಗೇ ನಿಮ್ಮ ಸಮುದಾಯಕ್ಕೆ ಶೇ. 26ರಷ್ಟು ಮೀಸಲಾತಿಯಿದೆ. ನೀವು ಈಗಲೂ ಮೀಸಲಾತಿ ಪತ್ರ ತಂದುಕೊಟ್ಟರೆ ನಿಮ್ಮಗೆ ಕೆಲಸ ಸಿಗಲಿದೆ' ಎಂದು ಸಂದರ್ಶಕರು ಹೇಳಿದಾಗ, ನನಗೆ ಮೀಸಲಾತಿಯಿಂದ ಸಿಗುವಂಥ ಯಾವುದೇ ಕೆಲಸ ಬೇಡ ಎಂದು ಸಂದರ್ಶನ ಕೊಠಡಿಯಿಂದ ಹೊರಬಂದರು!

ಅಸ್ಸಾಂನ ಶಿವಸಾಗರ ಜಿಲ್ಲೆಯಲ್ಲಿ ನೆಲೆಸಿರುವ ಬೋರಾ, ಅಲ್ಲಿನ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ತೀರಾ ಹಿಂದುಳಿದ ಪ್ರದೇಶಗಳಲ್ಲಿ ನೆಲೆಸಿರುವ ಜನರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮಾನವೀಯತೆಗಿಂತ ಈ ಜಗತ್ತಿನಲ್ಲಿ ಮೌಲ್ಯವಾದುದು ಯಾವುದೂ ಇಲ್ಲ ಎನ್ನುವ ಬೋರಾ, ಸಮಾಜ ಸೇವೆಯಲ್ಲೇ ಬದುಕಿನ ಸಾರ್ಥಕ್ಯ ಕಂಡುಕೊಳ್ಳುವುದಾಗಿ ಹೇಳುತ್ತಾರೆ. (ಕೃಪೆ: ಪ್ರಜಾವಾಣಿ)

## ಐದು ಎಕರೆಯಲ್ಲಿ 140 ಭತ್ತದ ತಳಿ

ನೆಲದ ಮಾತು

ಆಳುಗಳ ಸಮಸ್ಯೆಯ ಕಾರಣದಿಂದ ಭತ್ತ ಕೃಷಿಯಿಂದ ದೂರ ಸರಿಯುತ್ತಿರುವವರೇ ಅಧಿಕ. ಆದರೆ ಯಾವ ಸಮಸ್ಯೆಯೂ ಇಲ್ಲದೆಯೇ 50 ವರ್ಷಗಳಿಂದಲೂ ಭತ್ತದ ಕೃಷಿಯಲ್ಲಿ ಸೈ ಎನಿಸಿಕೊಂಡವರು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಬಂಗಾಡಿ ಸಮೀಪದ ಮಿತ್ತಬಾಗಿಲಿನ ಅಮ್ಮೆ ನಿವಾಸಿ ಬಿ.ಕೆ. ದೇವರಾವ್. ತಮ್ಮ 5 ಎಕರೆ ಗದ್ದೆಯಲ್ಲಿ 140ಕ್ಕೂ ಅಧಿಕ ತಳಿಗಳನ್ನು ಇವರು ವರ್ಷಕ್ಕೆ ಎರಡು ಬೆಳೆಗಳ ರೂಪದಲ್ಲಿ ಪಡೆಯುತ್ತಿದ್ದಾರೆ. ಪ್ರತಿಸಲವೂ 50 ಕ್ವಿಂಟಲ್‌ಗಿಂತ ಅಧಿಕ ಇಳುವರಿ ಅವರಿಗೆ ಸಿಗುತ್ತಿದೆ.



ತಮ್ಮ ವಯಸ್ಸನ್ನೂ ಲೆಕ್ಕಿಸದೇ ದೇವರಾವ್ ಖುದ್ದಾಗಿ ಬೆಳಗ್ಗೆ 5 ರಿಂದ ಸಂಜೆಯವರೆಗೂ ಗದ್ದೆಯಲ್ಲಿ ಕೆಲಸ ಮಾಡುತ್ತಾರೆ. ಕೆಲ ಅಪರೂಪದ ತಳಿಗಳನ್ನು ತಳಿ ಸಂರಕ್ಷಣೆಯ ಉದ್ದೇಶದಿಂದ ಒಂದೇ ಗದ್ದೆಯಲ್ಲಿ ಅನೇಕ ಬಗೆಯ ತಳಿಗಳನ್ನು ನಾಟಿ ಮಾಡುತ್ತಿದ್ದಾರೆ.

ಈ ಹಿಂದೆ ನಾಲ್ಕು ಬೆಳೆಯನ್ನು (ಏಣೆಲು, ಪಟ್ಲ, ಸುಗ್ಗಿ, ಕೊಳೆಕೆ) ಬೆಳೆಯುತ್ತಿದ್ದ ದೇವರಾವ್ ಅವರು, ಕೆಲ ವರ್ಷಗಳಿಂದ ಎರಡು ಬೆಳೆಯನ್ನು ಬೆಳೆಯುತ್ತಿದ್ದಾರೆ. ಒಂದನೇ ಬೆಳೆ ದೀರ್ಘಾವಧಿಯದ್ದು. ಇದರಲ್ಲಿ ಬೆಳೆಯುವುದು ಹಳೆಯ ತಳಿಗಳು. ಮೇ ಮೊದಲ ವಾರದಲ್ಲಿ ಬಿತ್ತನೆ ಮಾಡಲಾಗುತ್ತದೆ. ಸುಮಾರು 25 ತಳಿಗಳನ್ನು ಬೆಳೆಸುತ್ತಿದ್ದಾರೆ. ಎರಡನೇ ಬೆಳೆ ಅಲ್ಪಾವಧಿಯದ್ದು. ಜೂನ್ ಮೊದಲ ವಾರ ಬಿತ್ತನೆ ಮಾಡಿ ಬೇಗ ಫಸಲು ತೆಗೆಯಲಾಗುತ್ತದೆ. 95ಕ್ಕಿಂತಲೂ ಹೆಚ್ಚು ತಳಿಗಳನ್ನು ಬೆಳೆಸುತ್ತಿದ್ದಾರೆ. ರಾಸಾಯನಿಕ ಬಳಕೆಗೆ ಸಂಪೂರ್ಣ ವಿದಾಯ ಹೇಳಿದ ಅವರಿಗೆ ಹಟ್ಟಿಯ ಗೊಬ್ಬರವೇ ಜೀವಾಳ.

ಭತ್ತ ಬೆಳೆಯುವ ಕೃಷಿಕರಿಗೆ ತಳಿಗಳನ್ನು ನೀಡುತ್ತಾರೆ. ಮಾರಾಟದ ಉದ್ದೇಶವಿಲ್ಲದೇ, ಸ್ಥಳೀಯವಾಗಿ ಅಭಿವೃದ್ಧಿಯಾಗಬೇಕು ಎಂಬ ಉದ್ದೇಶದಿಂದ. ಉಪದ್ರವ ನೀಡುವ ಪ್ರಾಣಿಪಕ್ಷಿಗಳನ್ನು ಭಯಪಡಿಸಲು ಮರಗಳಿಗೆ ಖಾಲಿ ಬಾಟಲ್ ಕಟ್ಟಿದ್ದಾರೆ. ಅದರಿಂದ ಉಂಟಾಗುವ ಶಬ್ದದಿಂದ ಬರುವುದಿಲ್ಲ ಎಂಬುದು ದೇವರಾವ್ ಅವರ ಆವಿಷ್ಕಾರ. ಇವರ ಈ ಕಾರ್ಯಕ್ಕಾಗಿ 'ತಳಿ ತಪಸ್ವಿ' ಎಂಬ ಬಿರುದು ಸಿಕ್ಕಿದೆ. ರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ 'ಸೃಷ್ಟಿ ಸಮ್ಮಾನ್' ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಕೃಪೆ: ಪ್ರಜಾವಾಣಿ



**ಹೆಸರು:** ರಾಠೀ

**ಮೂಲ:** ರಾಜಸ್ಥಾನದ ಅಲ್ವಾರ್ ಜಿಲ್ಲೆ

**ವಿಭಾಗ:** ಹಾಲಿನ ತಳಿಗಳು

**ವಿಶೇಷತೆ:** ನಿರ್ವಹಣಾ ವೆಚ್ಚ ತೀರಾ ಕಡಿಮೆ. ಇದು ಸಾಹಿವಾಲ್, ಸಿಂಧಿ, ಥಾರ್ ಪಾರ್ಕರ್‌ಗಳ ಸಂಯೋಗದಿಂದ ಆದ ತಳಿಗಳು.

**ಸಂಪಾದಕೀಯ ಸಹಕಾರ** ಸತ್ಯನಾರಾಯಣ ಶಾನಭಾಗ್, ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಶ್ರೀವತ್ಸ, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್



ಕೆ.ಟಿ. ಆರತಿ ಬಳ್ಳಾರಿ ಜಿಲ್ಲೆ ಹೊಸಪೇಟೆಯಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ವಸತಿಸಹಿತ ಬುದ್ಧಿಮಾಂದ್ಯ ಶಾಲೆಯೊಂದನ್ನು ಆರಂಭಿಸಿ 35 ಮಕ್ಕಳಿಗೆ ವಿಶೇಷ ಶಿಕ್ಷಣ ನೀಡುತ್ತಿದ್ದಾರೆ. ಕೊಡಗು ಮೂಲದವರಾದ ಆರತಿ ಮಂಗಳೂರು ವಿವಿಯಲ್ಲಿ ಎಂಎಸ್‌ಡಬ್ಲೂನಲ್ಲಿ 2ನೇ ಶ್ರೇಯಾಂಕ ಪಡೆದ ಪ್ರತಿಭಾವಂತೆ. ಆರತಿಯವರ ಶಾಲೆಗೆ ಅವರ ಪತಿ ಹಾಗೂ ಕುಟುಂಬದವರಿಂದಲೇ ಧನಸಹಾಯ ಮಾಡುತ್ತಿದ್ದಾರೆ. ಕೇವಲ ಕಟ್ಟಡದ ಬಾಡಿಗೆಗಾಗಿ ಮಕ್ಕಳ ಪೋಷಕರಿಂದ ಅಲ್ಪಸ್ವಲ್ಪ ಹಣ ಪಡೆಯುತ್ತಾರೆ. ಬಡ ಪೋಷಕರು ಶುಲ್ಕ ಪಾವತಿಸದಿದ್ದರೂ ಆ ಮಕ್ಕಳಿಗೂ ಶಿಕ್ಷಣ ನೀಡುತ್ತಿದ್ದಾರೆ. ಪ್ರತಿ 7 ಮಕ್ಕಳಿಗೆ ಒಬ್ಬರು ಶಿಕ್ಷಕರು ಮತ್ತು ಆಯಾರನ್ನು ನೇಮಿಸಿಕೊಂಡಿದ್ದಾರೆ. ಶಿಕ್ಷಣದ ಜೊತೆ ಮಕ್ಕಳಿಗೆ ಪೇಪರ್ ಕವರ್ಸ್, ಮೇಣದ ಬತ್ತಿಗಳ ತಯಾರಿಯನ್ನು ಕಲಿಸುತ್ತಿದ್ದಾರೆ.

**ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕವಿತಾಳ ಗ್ರಾಮದ ನಿವಾಸಿ ಕವಿತಾ ಮಿಶ್ರಾ, ಕೃಷಿ ಕ್ಷೇತ್ರದಲ್ಲಿ ಸಾಧನೆಗೆ ಹಠ ಹಿಡಿದು ತಮ್ಮ 8 ಎಕರೆ ಬರಡು ಭೂಮಿಯಲ್ಲಿ ಸಾವಯವ ಕೃಷಿ ಹಾಗೂ ಹನಿ ನೀರಾವರಿ ಮೂಲಕ ಬಂಗಾರದಂತಹ ಬೆಳೆ ಬೆಳೆಯುತ್ತಿದ್ದಾರೆ. ಕಂಪ್ಯೂಟರ್ ಸೈನ್ಸ್ ಡಿಪ್ಲೋಮಾ ಜೊತೆಗೆ ಎಂಎ ಸೈಕಾಲಜಿ ಓದಿರೋ ಕವಿತಾ ಅವರು ಕಳೆದ 7 ವರ್ಷಗಳಲ್ಲಿ ಪ್ರಗತಿಪರ ರೈತ ಮಹಿಳೆಯಾಗಿದ್ದಾರೆ. ಅತೀ ಸಾಂದ್ರಿಕೃತ ಬೇಸಾಯ ಪದ್ಧತಿ ಅಳವಡಿಸಿಕೊಂಡು ಮಾವು, ಸೀತಾಫಲ, ದಾಳಿಂಬೆ, ಮೂಸಂಬಿ, ನಿಂಬು, ಸಪೋಟ, ಬಾರೇಹಣ್ಣು, ಮತ್ತಿ, ಶ್ರೀಗಂಧ, ರಕ್ತಚಂದನ ಸೇರಿದಂತೆ ನಾನಾ ಬಗೆಯ ಗಿಡಗಳನ್ನ ಬೆಳೆದಿದ್ದಾರೆ. ಶ್ರೀಗಂಧ ಹಾಗೂ ರಕ್ತಚಂದನದ ಮರಗಳ ಮಾರಾಟಕ್ಕೆ ಕೆಎಸ್‌ಡಿಎಲ್ ಜೊತೆ ಒಪ್ಪಂದ ಮಾಡಿಕೊಂಡಿದ್ದಾರೆ. ಕವಿತಾ ಅವರು ತೋಟದಲ್ಲೇ ಮನೆ ಮಾಡಿಕೊಂಡು ಹಸು, ಕುರಿ, ಕೋಳಿ ಸಾಕಾಣಿಕೆ ಮಾಡಿದ್ದಾರೆ. ವರ್ಷಕ್ಕೆ 25 ಲಕ್ಷ ರೂಪಾಯಿಗೂ ಅಧಿಕ ಆದಾಯ ಗಳಿಸುತ್ತಿದ್ದಾರೆ. ಇಂಗ್ಲಿಷ್, ಹಿಂದಿ, ಕನ್ನಡ ಸೇರಿದಂತೆ ಐದು ಭಾಷೆಗಳನ್ನು ಸುಲಲಿತವಾಗಿ ಮಾತನಾಡಬಲ್ಲ ಕವಿತಾರನ್ನು ವಿವಿಧ ಕೃಷಿ ವಿಶ್ವವಿದ್ಯಾಲಯಗಳ ಸಂಪನ್ಮೂಲ ವ್ಯಕ್ತಿಗಳು ಕೃಷಿ ಪದ್ಧತಿ ಬಗ್ಗೆ ಮಾಹಿತಿ ಪಡೆದು ಜನರಿಗೆ ತಲುಪಿಸುತ್ತಿದ್ದಾರೆ.**




ನೋಟು ಅಪಮೌಲ್ಯ ಮಾಡಿದ ಬಳಿಕ ಸರಕಾರಕ್ಕೆ ಅಕ್ರಮ ನಗದು ಮತ್ತು ಠೇವಣಿಗಳಿಂದ ಈವರೆಗೆ ಆರು ಸಾವಿರ ಕೋಟಿ ರೂ. ತೆರಿಗೆ ಸಂಗ್ರಹವಾಗಿದ್ದು, ಇನ್ನೂ ಹೆಚ್ಚುವ ನಿರೀಕ್ಷೆಯಿದೆ ಎಂದು ಕಪ್ಪು ಹಣ ವಿಶೇಷ ತನಿಖಾ ತಂಡದ ಉಪಾಧ್ಯಕ್ಷ ನ್ಯಾ. ಮೂ. ಅರ್ಜಿತ್ ಪಸಾಯತ್ ಹೇಳಿದ್ದಾರೆ. ನೋಟ್ ಬ್ಯಾನ್ ಬಳಿಕ ಪ್ರತಿ ಠೇವಣಿದಾರ ಹಣದ ಮೂಲದ ಮಾಹಿತಿಯನ್ನು ತೆರಿಗೆ ಇಲಾಖೆ ಅಧಿಕಾರಿಗಳು ಪಡೆದುಕೊಂಡಿದ್ದಾರೆ. ಹಳೆನೋಟು ಠೇವಣಿ ಮೇಲೆ ಶೇ. 60% ತೆರಿಗೆ ವಿಧಿಸಲಾಗಿತ್ತು. ಬಳಿಕ ತೆರಿಗೆ ಪ್ರಮಾಣವನ್ನು 75%.ರಷ್ಟಕ್ಕೆ ಹೆಚ್ಚಿಸಲಾಗಿತ್ತು. ಹೀಗಾಗಿ ದೊಡ್ಡ ಪ್ರಮಾಣದಲ್ಲಿ ತೆರಿಗೆ ಸಂಗ್ರಹವಾಗಿದೆ ಎಂದು ಪಸಾಯತ್ ವಿವರಿಸಿದ್ದಾರೆ. ನೋಟ್ ಬ್ಯಾನ್ ಬಳಿಕ 1,092 ಮಂದಿ 50 ಲಕ್ಷ ರೂ.ಗೂ ಹೆಚ್ಚಿನ ಮೊತ್ತ ಠೇವಣಿ ಮಾಡಿದ್ದು ಅವರಿಗೆ ನೋಟಿಸ್ ನೀಡಿದ್ದರೂ ಈವರೆಗೆ ಪ್ರತಿಕ್ರಿಯೆ ಸಲ್ಲಿಸಿಲ್ಲ ಎಂದು ಪಸಾಯತ್ ಹೇಳಿದ್ದಾರೆ.

**ಹಿಜ್ಬುಲ್ ಮುಜಾಹಿದೀನ್ ಉಗ್ರ ಸಂಘಟನೆಯ ವಕ್ತಾರ ಝಾಕಿರ್ ರಶೀದ್ ಭಟ್, ಬಿಟ್ಟಿರುವ ಹೊಸ ವಿಡಿಯೋದಲ್ಲಿ ಆತನ ತನ್ನ ಸಹಚರರಿಗೆ ಕಾಶ್ಮೀರದ ಸ್ವಾತಂತ್ರ್ಯದ ಬದಲು ಇಸ್ಲಾಂನ ಉಳಿವಿಗಾಗಿ ಯೋಧರ ಮೇಲೆ ಕಲ್ಲು ತೂರಾಟ ನಡೆಸಿ ಎಂದು ಅಲ್ಲಿನ ಮುಸ್ಲಿಂ ಯುವಕರಿಗೆ ಆಜ್ಞೆ ಮಾಡಿದ್ದಾನೆ. ಸಂಘಟನೆಯ ನಾಯಕತ್ವ ಹಿಡಿದಿರುವ ರಶೀದ್ ಭಟ್ ಅಲಿಯಾಸ್ ಝಾಕಿರ್ ಮುಸಾ, ಇತ್ತೀಚೆಗೆ ಇಸ್ಲಾಂ ಬೋಧನೆಯ ಹೆಸರಿನಲ್ಲಿ ವಿಡಿಯೋವೊಂದನ್ನು ಹರಿಬಿಟ್ಟಿದ್ದು, 12 ನಿಮಿಷಗಳ ಈ ವಿಡಿಯೋದಲ್ಲಿ ಕಾಶ್ಮೀರದ ಮುಸ್ಲಿಂ ಯುವಕರಿಗೆ ಭಾರತೀಯ ಸೇನೆ ವಿರುದ್ಧ ಕಲ್ಲು ತೂರಾಟ ನಡೆಸುವಂತೆ ಕೇಳಿಕೊಂಡಿದ್ದಾನೆ. 'ಕಲ್ಲು ತೂರಾಟ ನಡೆಸುವ ವೇಳೆ ಕೇವಲ ಒಬ್ಬ ಮೂಸನಿಗೆ ಅಥವಾ ಮುಜಾಹಿದೀನ್ ಸಂಘಟನೆಗೆ ಸಹಾಯ ಮಾಡುವುದಾಗಿ ಭಾವಿಸಬೇಡಿ. ನಿಮ್ಮ ಒಂದು ಕಲ್ಲು ಕಾಶ್ಮೀರದಲ್ಲಿ ಇಸ್ಲಾಂ ಧರ್ಮದ ಸ್ಥಾಪನೆಗೆ ಸಹಾಯ ಮಾಡುತ್ತದೆ. ಒಂದಲ್ಲಾ ಒಂದು ದಿನ ಇಲ್ಲಿ (ಕಾಶ್ಮೀರದಲ್ಲಿ) ನಾವು ಇಸ್ಲಾಂನ ಧ್ವಜವನ್ನು ಹಾರಿಸಬೇಕು ಎಂದು ಮುಸ್ಲಿಂ ಯುವಕರನ್ನೇ ಉದ್ದೇಶಿಸಿ ಭಾಷಣ ಮಾಡಿದ್ದಾನೆ.**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ನರೇಗಾ) ಹಣದ ದುರ್ಬಳಕೆ ತಡೆಯಲು 87 ಲಕ್ಷ ಉದ್ಯೋಗ ಕಾರ್ಡ್‌ಗಳನ್ನು ತೆಗೆದು ಹಾಕಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಹಳ್ಳಿಗಳಲ್ಲಿ ಕೃಷಿ ಕೆಲಸ ಇಲ್ಲದ ಸಂದರ್ಭದಲ್ಲಿ ಉದ್ಯೋಗ ಒದಗಿಸಿ ಸಂಪಾದನೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಪ್ರಾರಂಭಗೊಂಡ ನರೇಗಾ ಯೋಜನೆಯಲ್ಲಿ ನೋಂದಾಯಿತ ಕಾರ್ಮಿಕರಿಗೆ ಕನಿಷ್ಠ ನೂರು ದಿನ ಉದ್ಯೋಗ ಒದಗಿಸಲಾಗುತ್ತಿದೆ. ಇದು ದುರ್ಬಳಕೆ ಆಗಬಾರದು ಎಂಬ ಕಾರಣಕ್ಕೆ ಕೇಂದ್ರ ಸರ್ಕಾರ ಕಾರ್ಮಿಕರ ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಜೋಡಿಸಿ ನೇರವಾಗಿ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸುತ್ತಿದೆ. ಯೋಜನೆಯ 12.49 ಕೋಟಿ ಉದ್ಯೋಗ ಕಾರ್ಡ್‌ಗಳ ಪೈಕಿ ಈಗಾಗಲೇ ಶೇ. 63ರಷ್ಟು ಕಾರ್ಡ್‌ಗಳ ತಪಾಸಣೆ ಮಾಡಲಾಗಿದೆ. ತಪಾಸಣೆಯ ಸಂದರ್ಭದಲ್ಲಿ 87ಲಕ್ಷ ಉದ್ಯೋಗ ಕಾರ್ಡ್‌ಗಳು ನಕಲಿ ಫಲಾನುಭವಿಗಳ ಹೆಸರಿನಲ್ಲಿ ಇರುವುದು ಕಂಡುಬಂದಿದ್ದು ಅಂತಹವುಗಳನ್ನು ತೆಗೆದುಹಾಕಲಾಗಿದೆ.


# ಸಾಲುದ್ದದ ಸುದ್ದಿಗಳು

**ಜನಪ್ರತಿನಿಧಿಗಳ ವಿರುದ್ಧದ ಗಂಭೀರ ಆರೋಪ ಸಾಬೀತಾಗಿ ಶಿಕ್ಷೆಗೆ ಗುರಿಯಾದಲ್ಲಿ ಅವರಿಗೆ ಜೀವನ ಪರ್ಯಂತ ಚುನಾವಣೆ ನಿಷೇಧಿಸುವಂತೆ ಕೋರಿ ಕೇಂದ್ರ ಚುನಾವಣಾ ಆಯೋಗವು ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ. ಚುನಾವಣಾ ಅಕ್ರಮ ಸಂಬಂಧಿ ಪ್ರಕರಣಗಳನ್ನು ಶೀಘ್ರ ಇತ್ಯರ್ಥಗೊಳಿಸಬೇಕು ಹಾಗೂ ಅಪರಾಧ ಸಾಬೀತಾಗುವ ಜನಪ್ರತಿನಿಧಿಗಳು ಚುನಾವಣೆಗೆ ಸ್ಪರ್ಧಿಸಲು ಆಜೀವ ನಿಷೇಧ ಹೇರಬೇಕು ಎಂದು ಆಯೋಗ ನ್ಯಾಯಾಲಯವನ್ನು ಕೋರಿದೆ. ಸದ್ಯ ಅಪರಾಧ ಸಾಬೀತಾಗುವ ಅಭ್ಯರ್ಥಿಗೆ 6 ವರ್ಷಗಳ ಕಾಲ ಚುನಾವಣಾ ಸ್ಪರ್ಧೆಯಿಂದ ನಿಷೇಧ ಹೇರಲಾಗುತ್ತದೆ.**

ಪರವಾನಗಿ ಪಡೆಯದೆ ಇಂಜಿನಿಯರಿಂಗ್ ಸೇರಿದಂತೆ ವಿವಿಧ ತಾಂತ್ರಿಕ ಶಿಕ್ಷಣ ನೀಡುತ್ತಿರುವ 279 ನಕಲಿ ಸಂಸ್ಥೆಗಳನ್ನು ಗುರುತಿಸಲಾಗಿದ್ದು ವಿದ್ಯಾರ್ಥಿಗಳು ಈ ಕುರಿತು ಜಾಗ್ರತೆ ವಹಿಸುವಂತೆ ವಿಶ್ವವಿದ್ಯಾಲಯಗಳ ಅನುದಾನ ಆಯೋಗ(ಯುಜಿಸಿ) ತಿಳಿಸಿದೆ. ಈಗಾಗಲೇ ಯುಜಿಸಿ ಹಾಗೂ ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಮಂಡಳಿ(ಎಐಸಿಟಿಇ) ಅಧಿಕೃತ ವೆಬ್‌ಸೈಟ್‌ಗಳಲ್ಲಿ ನಕಲಿ ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇಂತಹ ಸಂಸ್ಥೆಗಳು ನೀಡುವ ಪ್ರಮಾಣ ಪತ್ರ ಕೇವಲ 'ತುಂಡು ಕಾಗದ' ಅಷ್ಟೇ. ಸರ್ಕಾರದಿಂದ ಇದಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ. ಒಟ್ಟು 23 ನಕಲಿ ವಿಶ್ವವಿದ್ಯಾಲಯಗಳಿದ್ದು ರಾಜಧಾನಿ ನವದೆಹಲಿ ಇಂಥ 7 ವಿವಿಗಳನ್ನು ಹೊಂದಿದೆ. ಈ ಪಟ್ಟಿಯನ್ನು ನಿಗದಿತ ರಾಜ್ಯಗಳಿಗೆ ಕಳುಹಿಸಲಾಗಿದ್ದು, ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ ಎಂದು ಆಯೋಗದ ತಿಳಿಸಿದೆ.



**ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಭಾರತೀಯ ಸೇನೆ ನಡೆಸಿದ ನಿರ್ದಿಷ್ಟ ದಾಳಿಯ(ಸರ್ಜಿಕಲ್ ಸ್ಟ್ರೈಕ್) ನೇತೃತ್ವ ವಹಿಸಿದ್ದ ಮೇಜರ್ ರೋಹಿತ್ ಸೂರಿ ಅವರಿಗೆ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು 'ಕೀರ್ತಿ ಚಕ್ರ' ಪ್ರದಾನ ಮಾಡಿದರು. ಶಾಂತಿ ಕಾಲದಲ್ಲಿ ನಡೆಸುವ ಕಾರ್ಯಾಚರಣೆಗಳಲ್ಲಿ ಶೌರ್ಯ ಮೆರೆಯುವ ಯೋಧರಿಗೆ ನೀಡುವ ಎರಡನೆಯ ಅತ್ಯುನ್ನತ ಗೌರವ 'ಕೀರ್ತಿ ಚಕ್ರ'.**



ಉತ್ತರಾಖಂಡ ಹೈಕೋರ್ಟ್ ಹಿಂದುಗಳ ಪವಿತ್ರ ನದಿಯಾಗಿರುವ ಗಂಗಾ ನದಿಗೆ 'ಸಜೀವಿ' ಎಂದು ಮಾನ್ಯತೆ ನೀಡಿದೆ. 'ಜೀವನದಿ' ಅರ್ಥಾತ್ ಜೀವಂತ ವ್ಯಕ್ತಿ' ಎಂಬರ್ಥದಲ್ಲಿ ಹೇಳಿದೆ. ದೇಶದ ಇತಿಹಾಸದಲ್ಲಿ ನದಿಗೆ ಮನುಷ್ಯ ಜೀವಿಗೆ ನೀಡಲಾಗುವ ಮಾದರಿಯಲ್ಲಿ ಮಾನ್ಯಮಾಡಿರುವ ಅಪರೂಪದ ಮತ್ತು ಮೊದಲ ಪ್ರಕರಣ ಇದಾಗಿದೆ. ಮನುಷ್ಯನಿಗಿರುವ ಹಕ್ಕುಗಳು ಗಂಗಾನದಿಯೂ ಹೊಂದಿರಲಿದೆ. ಒಂದೊಮ್ಮೆ, ಮಲೀನಗೊಳಿಸಿದಲ್ಲಿ ಒಬ್ಬ ಜೀವಂಥ ವ್ಯಕ್ತಿ ವಿರುದ್ಧ ಅಪರಾಧ ಎನ್ನುವಂತೆ ಪರಿಗಣಿಸಲಾಗುತ್ತದೆ



## ಅಯೋಧ್ಯೆ ವಿವಾದ: ಸಂಧಾನಕ್ಕೆ ಸುಪ್ರೀಂ ಕೋರ್ಟ್ ಸಲಹೆ

ಮಹತ್ವದ ಬೆಳವಣಿಗೆಯೊಂದರಲ್ಲಿ, ಅಯೋಧ್ಯೆ ರಾಮ ಜನ್ಮಭೂಮಿ ಮತ್ತು ಬಾಬ್ರಿ ಕಟ್ಟಡ ವಿವಾದವನ್ನು ನ್ಯಾಯಾಲಯದ ಹೊರಗೆ ಮಾತುಕತೆ ಮೂಲಕ ಬಗೆಹರಿಸಿಕೊಳ್ಳುವುದು ಉತ್ತಮ ಮಾರ್ಗ ಎಂದು ಸುಪ್ರೀಂ ಕೋರ್ಟ್ ಸಲಹೆ ನೀಡಿದೆ.

ವಿವಾದವನ್ನು ತ್ವರಿತವಾಗಿ ಬಗೆಹರಿಸಲು ಸುಪ್ರೀಂಕೋರ್ಟ್ ಮಧ್ಯ ಪ್ರವೇಶಿಸಿ ರಾಮ ಮಂದಿರ ನಿರ್ಮಾಣಕ್ಕೆ ಅನುವು ಮಾಡಿಕೊಡಬೇಕು ಎಂದು ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಜೆ.ಎಸ್. ಖೇಹರ್ ಅವರ ನೇತೃತ್ವದ ತ್ರಿಸದಸ್ಯ ಪೀಠವು, ಭಾವನಾತ್ಮಕ ಮತ್ತು ಅತ್ಯಂತ ಸೂಕ್ಷ್ಮವಿಷಯಗಳನ್ನು ಒಳಗೊಂಡಿರುವ ಈ ವಿವಾದವನ್ನು ಬಗೆಹರಿಸಿಕೊಳ್ಳಲು ಅನ್ಯೋನ್ಯ ವಿಶ್ವಾಸದಿಂದ ಕೊಡುಕೊಳ್ಳುವಿಕೆಯ ಆಧಾರದಲ್ಲಿ ಮಾತುಕತೆ ನಡೆಸಬೇಕು. ಒಂದು ವೇಳೆ ಚರ್ಚೆಯಲ್ಲಿ ಸಮಸ್ಯೆ ಇತ್ಯರ್ಥವಾಗದಿದ್ದಲ್ಲಿ ಆಗ ಸರ್ವೋಚ್ಚ ನ್ಯಾಯಾಲಯವೇ ತೀರ್ಪು ನೀಡುತ್ತದೆ ಎಂದಿದೆ. ಈ ನಿಟ್ಟಿನಲ್ಲಿ ವಿವಾದಕ್ಕೆ ಸಂಬಂಧಿಸಿದವರ ಅಭಿಪ್ರಾಯವೇನೆಂಬುದನ್ನು ಮಾರ್ಚ್ 31ರೊಳಗೆ ತಿಳಿಸುವಂತೆ ಅರ್ಜಿದಾರ ಸುಬ್ರಮಣಿಯನ್ ಸ್ವಾಮಿ ಅವರಿಗೆ ಕೋರ್ಟ್ ಸೂಚಿಸಿದೆ.

**ಅಲಹಾಬಾದ್ ಹೈಕೋರ್ಟ್ ತೀರ್ಪು:**

ಅಯೋಧ್ಯೆ ವಿವಾದಕ್ಕೆ ಸಂಬಂಧಿಸಿದಂತೆ 2010ರಲ್ಲಿ ತೀರ್ಪು ನೀಡಿದ್ದ ಅಲಹಾಬಾದ್ ಹೈಕೋರ್ಟ್, ಶ್ರೀರಾಮನ ಜನ್ಮಸ್ಥಳ ಅಯೋಧ್ಯೆಯೇ; ವಿವಾದಿತ ಬಾಬರೀ ಕಟ್ಟಡವಿದ್ದ ಜಾಗದಲ್ಲಿ ಹಿಂದೆ ಭವ್ಯ ರಾಮಮಂದಿರವಿತ್ತು. ಹೀಗಾಗಿ ಹಿಂದುಗಳಿಗೆ ವಿವಾದಿತ ಸ್ಥಳದಲ್ಲಿ ರಾಮನನ್ನು ಪೂಜಿಸುವ ಎಲ್ಲ ಹಕ್ಕು ಇದೆ ಎಂದು ಹೇಳಿತ್ತು. ಜತೆಗೆ ವಿವಾದಿತ 2 ಎಕರೆ 77 ಗುಂಟೆ ಭೂಮಿಯನ್ನು ಅರ್ಜಿದಾರರಾದ ಸುನ್ನಿ ವಕ್ಫ್ ಮಂಡಳಿ, ನಿರ್ಮೋಹಿ ಅಖಾರ ಮತ್ತು ಹಿಂದು ಮಹಾಸಭಾ (ರಾಮಲಲ್ಲಾ) ಸಮಾನವಾಗಿ ಹಂಚಿಕೊಳ್ಳಬೇಕು ಎಂದು ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿ ವಿಚಾರಣೆ ನಡೆಸಿರುವ ಸುಪ್ರೀಂಕೋರ್ಟ್, ತೀರ್ಪನ್ನು ಕಾಯ್ದಿರಿಸಿದೆ. 1992ರ ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಸೇರಿದ್ದ ಕರಸೇವಕರು ಶ್ರೀರಾಮ ಜನಿಸಿದ ಅಯೋಧ್ಯೆಯಲ್ಲಿದ್ದ ಭವ್ಯ ಶ್ರೀರಾಮಮಂದಿರವನ್ನು ಧ್ವಂಸಗೊಳಿಸಿ ಕಟ್ಟಲಾಗಿದ್ದ 16ನೇ ಶತಮಾನದ ವಿವಾದಿತ ಬಾಬ್ರಿ ಕಟ್ಟಡವನ್ನು ನೆಲಸಮ ಮಾಡಿದ್ದರು.

**ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಅದಿತ್ಯನಾಥ್ ಅವರು ಅಯೋಧ್ಯೆಯಲ್ಲಿ ರಾಮಾಯಣ ಕುರಿತ ವಸ್ತುಸಂಗ್ರಹಾಲಯ (ಮ್ಯೂಸಿಯಂ) ನಿರ್ಮಿಸಲು 20 ಎಕರೆ ಜಮೀನು ಮಂಜೂರು ಮಾಡಲು ಸಮ್ಮತಿಸಿದ್ದಾರೆ. ಅಯೋಧ್ಯೆಯಲ್ಲಿ 154 ಕೋಟಿ ರೂ. ವೆಚ್ಚದಲ್ಲಿ ರಾಮಾಯಣ ಕುರಿತ ಮ್ಯೂಸಿಯಂ ನಿರ್ಮಿಸಲು ಅಗತ್ಯ ಭೂಮಿ ನೀಡುವಂತೆ ಕೇಂದ್ರ ಸರ್ಕಾರವು ಉತ್ತರ ಪ್ರದೇಶ ಸರ್ಕಾರಕ್ಕೆ ಮನವಿ ಮಾಡಿಕೊಂಡಿತ್ತು. ಆದರೆ ಆಗಿನ ಮುಖ್ಯಮಂತ್ರಿ ಅಖಿಲೇಶ ಯಾದವ್ ಈ ಕಡತವನ್ನು ವಿಲೇವಾರಿ ಮಾಡಿರಲಿಲ್ಲ. ಮೂರು ದಿನಗಳ ಹಿಂದೆಯಷ್ಟೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಯೋಗಿ ಅದಿತ್ಯನಾಥ ಅವರು ಕೇಂದ್ರ ಸರ್ಕಾರದ ಕೋರಿಕೆಗೆ ಸ್ಪಂದಿಸಿ, 20 ಎಕರೆ ಜಾಗ ಮಂಜೂರು ಮಾಡಿ ಯೋಜನೆಗೆ ಅಗತ್ಯ ಸಹಕಾರ ನೀಡುವುದಾಗಿ ಹೇಳಿದ್ದಾರೆ.**

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17

1-4-2017



# ಶತ್ರು ಆಸ್ತಿ ಕಾಯ್ದೆ – ಏನಿದರ ಮಹತ್ವ!



ಯಾವುದೇ ದೇಶ ಯುದ್ಧವನ್ನೆದುರಿಸಬೇಕಾಗಿ ಬಂದಾಗ ತನ್ನ ನೆಲದಲ್ಲಿರುವ ಶತ್ರು ದೇಶದ ಅಥವಾ ಶತ್ರು ದೇಶದ ನಾಗರಿಕರಿಗೆ ಸೇರಿದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಸಾಮಾನ್ಯ. ಮೊದಲನೇ ಹಾಗೂ ಎರಡನೇ ಮಹಾಯುದ್ಧದ ಸಂದರ್ಭದಲ್ಲಿಯೂ ಹಾಗೆಯೆ ಆಗಿತ್ತು. ಅಮೆರಿಕ ಹಾಗೂ ಇಂಗ್ಲೆಂಡ್ ದೇಶಗಳು ಜರ್ಮನಿಯ ನಾಗರಿಕರಿಗೆ ಹಾಗೂ ಸಂಸ್ಥೆಗಳಿಗೆ ಸೇರಿದ ಆಸ್ತಿಗಳನ್ನು ವಶಪಡಿಸಿಕೊಂಡಿದ್ದವು. ಇಂತಹ ಸಂದರ್ಭಗಳಲ್ಲಿ ವಶಪಡಿಸಿಕೊಂಡ ಆಸ್ತಿಯನ್ನು 'ಶತ್ರುಗಳ ಆಸ್ತಿ'ಯೆಂದು ಕರೆಯಲಾಗುತ್ತದೆ.

ನಮ್ಮ ದೇಶದಲ್ಲೂ ಸಹ ಚೀನಾ (1962) ಹಾಗೂ ಪಾಕಿಸ್ತಾನ (1965 & 1971)ದೊಂದಿಗಿನ ಯುದ್ಧದ ಸಂದರ್ಭದಲ್ಲಿ ಹೀಗೆಯೆ ರಕ್ಷಣಾ ಕಾಯಿದೆಯಡಿಯಲ್ಲಿ ಚೀನಿಯರ ಹಾಗೂ ಪಾಕಿಸ್ತಾನಿಯರ ಆಸ್ತಿಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಕಾಯಿದೆಯಲ್ಲಿ ಭಾರತದ ಮೇಲೆ ಆಕ್ರಮಣ ಮಾಡುವ ಯಾವುದೇ ರಾಷ್ಟ್ರ, ಮತ್ತದರ ಪ್ರಜೆಗಳನ್ನು 'ಶತ್ರು'ಗಳೆಂದು ವ್ಯಾಖ್ಯಾನಿಸಲಾಗಿತ್ತು. ಆದರೆ ಈ ರಕ್ಷಣಾ ಕಾಯ್ದೆಗಳು ತಾತ್ಕಾಲಿಕ ಕಾನೂನುಗಳಾದ್ದರಿಂದ ಯುದ್ಧದ ಸಂದರ್ಭದಲ್ಲಿ ಮಾತ್ರ ಚಾಲ್ತಿಯಲ್ಲಿರುತ್ತವೆ. ಯುದ್ಧದ ನಂತರದ ದಿನಗಳಲ್ಲಿ ಈ ಆಸ್ತಿಗಳ ಆಡಳಿತದ ಹಕ್ಕು ಸರ್ಕಾರಕ್ಕೆ ಸಿಗುವಂತೆ 1968ರಲ್ಲಿ 'ಶತ್ರು ಆಸ್ತಿ ಕಾಯ್ದೆ'ಯನ್ನು ಜಾರಿಗೆ ತರಲಾಯಿತು.

ಇಲ್ಲಿಯವರೆಗೆ ಸುಮಾರು 1,04,339 ಕೋಟಿ ರೂಪಾಯಿ ಮೌಲ್ಯದ 9500 ಆಸ್ತಿಗಳನ್ನು ಶತ್ರು ಆಸ್ತಿಯೆಂದು ಗುರುತಿಸಲಾಗಿದೆ, ಇದರಲ್ಲಿ ಹೆಚ್ಚಿನದು ಪಾಕಿಸ್ತಾನದವರಿಗೆ ಸೇರಿದ್ದಾಗಿದೆ. 1968ರ ಈ ಕಾಯ್ದೆ ಆಸ್ತಿಯ ಮೂಲ ಮಾಲಿಕರಿಗೆ ಕೆಲ ಹಕ್ಕುಗಳನ್ನು ನೀಡಿತ್ತು. ಇದರಿಂದ ಹಲವು ವಿವಾದಗಳು ಹುಟ್ಟಿಕೊಂಡವು ಹಾಗೂ ಹಲವರು ಪೂರ್ವಜರ (ಶತ್ರು ದೇಶದವರ) ಆಸ್ತಿಯ ಮೇಲಿನ ಹಕ್ಕಿಗಾಗಿ ನ್ಯಾಯಾಲಯದ ಮೆಟ್ಟಿಲೇರಿದರು. ಹಲವು ಪ್ರಸಂಗಗಳಲ್ಲಿ ನ್ಯಾಯಾಲಯಗಳಲ್ಲಿ ಕಾನೂನು ಹೋರಾಟಗಳು ನಡೆದವಾದರೂ, 2005ರಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಸರ್ಕಾರ ಈ ಅಸ್ತಿಗಳನ್ನು ಟ್ರಸ್ಟಿಯ ರೀತಿ ನೋಡಿಕೊಳ್ಳುತ್ತದೆ. ಆದರೂ ಮೂಲ ಮಾಲಿಕರು ಶತ್ರುವೇ (ಶತ್ರು ದೇಶದ ಪ್ರಜೆ) ಆಗಿರುತ್ತಾರೆ. ಆದ್ದರಿಂದ ಅವರ ಸಾವಿನ ನಂತರ ಅವರ ಅನುವಂಶಿಕರಿಗೆ ಆ ಆಸ್ತಿಯ ಹಕ್ಕಿರುತ್ತದೆ ಎಂದಿತ್ತು. ಇದರಿಂದ ಸರ್ಕಾರ ವಶಪಡಿಸಿಕೊಂಡಿದ್ದ 'ಶತ್ರು ಆಸ್ತಿ'ಗಳ ಮೇಲೆ ಸರ್ಕಾರಕ್ಕೆ ಹಕ್ಕಿಲ್ಲದಂತಾಯಿತು.

ಈ ಅಸ್ತಿಗಳ ಮೇಲೆ ಪಾಲಕರ, ಅಂದರೆ ಸರ್ಕಾರದ ಅಧಿಕಾರವನ್ನು ವಿಸ್ತರಿಸುವ ನಿಟ್ಟಿನಲ್ಲಿ ಕಾನೂನಿನಲ್ಲಿ ಬದಲಾವಣೆ ತರಲು 2010ರಲ್ಲಿ ಕೆಲ ಪ್ರಯತ್ನಗಳು ನಡೆದವಾದರೂ ಅದು ಸಫಲವಾಗಿರಲಿಲ್ಲ. ಕಳೆದ ವಾರ ಕೇಂದ್ರ ಸರ್ಕಾರ 1968ರ ಈ ಕಾಯ್ದೆಗೆ ಪ್ರಮುಖ ಬದಲಾವಣೆಯನ್ನು ಮಾಡಿ, ಸಂಸತ್ತಿನ ಅನುಮೋದನೆಯನ್ನು ಸಹ ಪಡೆಯುವಲ್ಲಿ ಯಶಸ್ವಿಯಾಗಿದೆ. ಈ ಬದಲಾವಣೆಯ ಪ್ರಕಾರ, ಸರ್ಕಾರ ಹೀಗೆ ವಶಪಡಿಸಿಕೊಂಡ ಎಲ್ಲಾ ಆಸ್ತಿಗಳಿಗೂ ಇನ್ನು ಮುಂದೆ ಕೇಂದ್ರ ಸರ್ಕಾರವೇ ಸಂಪೂರ್ಣ ಮಾಲಿಕತ್ವ ಹೊಂದಿರುತ್ತದೆ ಹಾಗೂ ಶತ್ರು ದೇಶದ ಪ್ರಜೆಗಾಗಲಿ ಅಥವಾ ಅವರ ಅನುವಂಶಿಕರಿಗಾಗಲಿ ಈ ಆಸ್ತಿಗಳ ಮೇಲಿನ ಯಾವ ಹಕ್ಕೂ ಇರುವುದಿಲ್ಲ. ಪಾಕಿಸ್ತಾನ ಈ ರೀತಿಯ ನಿರ್ಧಾರವನ್ನು 1971ರಲ್ಲಿಯೇ ತೆಗೆದುಕೊಂಡಿತ್ತು, ಅಲ್ಲಿನ ಸರ್ಕಾರ ತಾನು ವಷಪಡಿಸಿಕೊಂಡಿದ್ದ ಎಲ್ಲಾ ಆಸ್ತಿಗಳನ್ನು ಅಂದೇ ಮಾರಾಟ ಸಹ ಮಾಡಿತ್ತು. ಈ ಮಹತ್ವಪೂರ್ಣ ಬದಲಾವಣೆಯನ್ನು ನಮ್ಮ ಸರ್ಕಾರ ಈಗಲಾದರೂ ಮಾಡಿತಲ್ಲ ಅನ್ನುವುದೇ ಸಮಾಧಾನಕರ.

## ಪತಂಜಲಿ ಉತ್ಪನ್ನ ಚೀನಾಗೂ ರಫ್ತು

ಗ್ರಾಹಕವಸ್ತುಗಳನ್ನು ಪೂರೈಸುವ ವಿದೇಶಿ ಕಂಪನಿಗಳಿಗೆ ಪ್ರತಿಸ್ಪರ್ಧಿಯಾಗಿರುವ ಬಾಬಾ ರಾಮದೇವ್ ನೇತೃತ್ವದ ಪತಂಜಲಿ ಸಂಸ್ಥೆ ಇದೀಗ ಉತ್ಪನ್ನಗಳನ್ನು ಚೀನಾ, ಮ್ಯಾನ್ಮಾರ್, ಬಾಂಗ್ಲಾದೇಶಗಳಿಗೆ ರಫ್ತು ಮಾಡಲು ಮುಂದಾಗಿದೆ. ಉತ್ಪನ್ನಗಳನ್ನು ರಸ್ತೆ, ಜಲ ಹಾಗೂ ವಿಮಾನ ಸಾಗಿಗೆ ಮೂಲಕ ನೆರೆ ರಾಷ್ಟ್ರಗಳಿಗೆ ಸಾಗಿಸಲು ಅನುಕೂಲವಾಗುವ ದೃಷ್ಟಿಯಿಂದ ಜಾರ್ಖಂಡ್ ರಾಜ್ಯದ ಸಾಹಿಬ್‌ಗಂಜ್ ಜಿಲ್ಲೆಯಲ್ಲಿ ಪತಂಜಲಿ ಉತ್ಪಾದನಾ ಬೃಹತ್ ಘಟಕ ನಿರ್ಮಿಸಲು ಮುಂದಾಗಿದೆ.

ಈಗಾಗಲೇ ನೇಪಾಳ ಹಾಗೂ ಬಾಂಗ್ಲಾದೇಶದಲ್ಲಿ ಉತ್ಪಾದನಾ ಘಟಕ ಸ್ಥಾಪಿಸಿರುವ ಪತಂಜಲಿ, ಮಧ್ಯ ಏಷ್ಯಾದ ಸೌದಿ ಅರೇಬಿಯಾದಲ್ಲೂ ಉತ್ಪನ್ನಗಳಿಗೆ ಭಾರಿ ಬೇಡಿಕೆ ಇದೆ ಎಂದು ಅದು ತಿಳಿಸಿದೆ. ಹರಿದ್ವಾರದಲ್ಲಿರುವ ಉತ್ಪಾದನಾ ಘಟಕಕ್ಕಿಂತ ದೊಡ್ಡದಾದ 40 ಲಕ್ಷ ಚದರ ಅಡಿ ವಿಸ್ತೀರ್ಣದ ಘಟಕವನ್ನು ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯ ಮಿಹಾನ್‌ದಲ್ಲಿ ತೆರೆಯಲು ಪತಂಜಲಿ ಯೋಜನೆ ರೂಪಿಸಿದೆ.




## ತ್ರಿವಳಿ ತಲಾಖ್ ನಿಷೇಧಿಸಲು ಆಗ್ರಹಿಸಿ 10 ಲಕ್ಷ ಮುಸ್ಲಿಮರ ಸಹಿ



ರಾಷ್ಟ್ರೀಯ ದೃಷ್ಟಿಕೋನ ಹೊಂದಿರುವ ಮುಸ್ಲಿಂ ರಾಷ್ಟ್ರೀಯ ಮಂಚ್ (ಎಂಆರ್‌ಎಂ) ದೇಶದಾದ್ಯಂತ ಚರ್ಚೆಯಾಗಬೇಕು ಎಂಬ ಉದ್ದೇಶದಿಂದ ತ್ರಿವಳಿ ತಲಾಕ್ ಕುರಿತು ಅಭಿಯಾನ ಆರಂಭಿಸಿದ್ದು, ತ್ರಿವಳಿ ತಲಾಕ್ ವಿರೋಧಿಸಿ 10 ಲಕ್ಷಕ್ಕೂ ಅಧಿಕ ಮುಸ್ಲಿಮರು ಸಹಿ ಮಾಡಿದ್ದಾರೆ. ಇದರಲ್ಲಿ ಹೆಚ್ಚಿನವರು ಮಹಿಳೆಯರು. ಆರೆಸ್ಸೆಸ್‌ನ ಪ್ರಚಾರಕ ಇಂದ್ರೇಶ ಕುಮಾರ್ ಅವರು, ಇದು ಒಂದು ಸಮುದಾಯದ ಸಮಸ್ಯೆ. ಸಮುದಾಯದ ಮುಖಂಡರು, ರಾಜ್ಯದ ಪ್ರತಿನಿಧಿಗಳು ಮತ್ತು ಸರ್ಕಾರ ಒಟ್ಟಾಗಿ ಚರ್ಚಿಸುವ ಮೂಲಕ ಮುಸ್ಲಿಂ ಮಹಿಳೆಯರಿಗೆ ಸ್ಥಾನಮಾನ ಲಭಿಸುವಂತೆ ಮಾಡಬೇಕು. ಎಂದ ಅಭಿಪ್ರಾಯಪಟ್ಟಿದ್ದಾರೆ.

## ಗುಜರಾತ್‌ನಲ್ಲಿ ಗೋಹತ್ಯೆಗೆ ಜೀವಾವಧಿ ಶಿಕ್ಷೆ!



ಗೋವುಗಳನ್ನು ರಕ್ಷಣೆ ಮಾಡುವ ಉದ್ದೇಶದಿಂದ ಅತಿ ಕಠಿಣ ಕಾನೂನು ತರಲು ಗುಜರಾತ್ ಸರ್ಕಾರ ಮುಂದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಮಸೂದೆಯೊಂದನ್ನು ಸಿದ್ಧಪಡಿಸಿದೆ. ಇದರ ಅನ್ವಯ ಗೋವುಗಳನ್ನು ಕಳ್ಳಸಾಗಣೆ ಅಥವಾ ಹತ್ಯೆ ಮಾಡಿದರೆ ಅಂಥವರಿಗೆ ಜೀವಾವಧಿ ಶಿಕ್ಷೆ ಹಾಗೂ 1 ಲಕ್ಷ ರೂ. ದಂಡ ವಿಧಿಸಲಾಗುತ್ತದೆ! 2011ರಲ್ಲಿ ಪ್ರಧಾನಿ ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಗೋಹತ್ಯೆ ಹಾಗೂ ಗೋಸಾಗಣೆ ಮೇಲೆ ಸಂಪೂರ್ಣ ನಿಷೇಧ ಹೇರಲಾಗಿತ್ತು. ಈವರೆಗೆ ಈ ಕಾಯ್ದೆಯನ್ವಯ ಇಂಥ ಪ್ರಕರಣಗಳಲ್ಲಿ ಭಾಗಿಯಾದವರಿಗೆ 7 ವರ್ಷ ಜೈಲು ಹಾಗೂ 50 ಸಾವಿರ ರೂ. ದಂಡ ವಿಧಿಸಲಾಗುತ್ತದೆ.

## ಪುಂಗವ ಪತ್ರಿಕೆಯ ಪ್ರಾರೂಪ
(ಪ್ರಾರೂಪ–8, ವಿಧಿ–8)

| | | |
|---|---|---|
| ಪ್ರಕಟಣೆಯ ಸ್ಥಳ | : | #74, ರಂಗರಾವ್ ರಸ್ತೆ, ಬೆಂಗಳೂರು – 560 004 |
| ಪ್ರಕಾಶಕ | : | ಕಾ.ಶ್ರೀ. ನಾಗರಾಜ, #74, ರಂಗರಾವ್ ರಸ್ತೆ, ಬೆಂಗಳೂರು – 560 004 |
| ಸಂಪಾದಕ | : | ಕಾ.ಶ್ರೀ. ನಾಗರಾಜ, #74, ರಂಗರಾವ್ ರಸ್ತೆ, ಬೆಂಗಳೂರು – 560 004 |
| ಭಾರತದ ಪ್ರಜೆಯೇ | : | ಹೌದು |
| ಮುದ್ರಕ | : | ರಾಷ್ಟ್ರೋತ್ಥಾನ ಮುದ್ರಣಾಲಯ, ಕೆಂಪೇಗೌಡನಗರ, ಬೆಂಗಳೂರು–560 019 |

ಮೇಲೆ ಹೇಳಿರುವ ಎಲ್ಲ ಮಾಹಿತಿಗಳೂ ಪೂರ್ಣ ಸತ್ಯವೆಂದು ನಾನು ಕಾ.ಶ್ರೀ. ನಾಗರಾಜ (#74, ರಂಗರಾವ್ ರಸ್ತೆ, ಬೆಂಗಳೂರು – 560 004) ಘೋಷಿಸುತ್ತೇನೆ.

ಬೆಂಗಳೂರು
10–3–2017

ಸಹಿ/–
ಕಾ.ಶ್ರೀ. ನಾಗರಾಜ
(ಸಂಪಾದಕ–ಪ್ರಕಾಶಕ)

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021